## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಗುಬ್ಬಿ

**ದಿನಾಂಕಃ 04.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ. ಎನ್ ಎಸ್ ರವರಿಂದ

ನಿಮ್ಮ ತಂದೆ ಚಿಕ್ಕರಂಗಯ್ಯ ರವರ ತಂದೆಯ ಹೆಸರು ದೊಡ್ಡಕಾಳಯ್ಯ ಎಂದರೆ ಸರಿ. ಸದರಿ ದೊಡ್ಡಕಾಳಯ್ಯ ರವರಿಗೆ 4 ಜನ ಮಕ್ಕಳು ಎಂದರೆ ಸರಿ. ಅವರುಗಳೆಂದರೆ ರಂಗಯ್ಯ, ಭದ್ರಯ್ಯ, ನಿಮ್ಮ ತಂದೆ ಚಿಕ್ಕರಂಗಯ್ಯ ಮತ್ತು ಕೆಂಚಯ್ಯ ಎಂದರೆ ಸರಿ. ಭದ್ರಯ್ಯ ರವರಿಗೆ 6 ಜನ ಮಕ್ಕಳು ಎಂದರೆ ಸರಿ. ಅವರುಗಳೆಂದರೆ ರಂಗಯ್ಯ, ವಾದಿ ತಿಮ್ಮಯ್ಯ, ಚಿಕ್ಕರಂಗಯ್ಯ, ಮರಿರಂಗಯ್ಯ, ಬಸವರಾಜು ಮತ್ತು ಕಾಳೇಗೌಡ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತು ಮೂಲತಃ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಪಿತ್ರಾರ್ಜಿತ ಆಸ್ತಿಗಳಲ್ಲಿ ನಿಮ್ಮ ತಂದೆ ಮತ್ತು ಅವರ ಅಣ್ಣ ತಮ್ಮಂದಿರು ಹಿಂದೆಯೆ ಭಾಗವಾಗಿದ್ದರು ಎಂದರೆ ಸಾಕ್ಷಿಯು 1995-96 ರಲ್ಲಿ ಭಾಗವಾಗಿದ್ದರು ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತು ಭದ್ರಯ್ಯ ರವರ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ.ನಂ.50/7 ಬಿ ರಲ್ಲಿನ 32 ಗುಂಟೆಗೆ ಚಕ್ಕುಬಂದಿ ಏನು ಎಂದರೆ ಸಾಕ್ಷಿಯು ಪೂರ್ವಕ್ಕೆ – ಸರ್ಕಾರಿ ಹಳ್ಳ, ಪಶ್ಚಿಮಕ್ಕೆ – ನರಸಿಂಹಮೂರ್ತಿ ರವರ ಜಮೀನು, ಉತ್ತರಕ್ಕೆ – ಕೆಂಚಪ್ಪ ರವರ ಜಮೀನು, ದಕ್ಷಿಣಕ್ಕೆ – ಚಿಕ್ಕರಂಗಯ್ಯ ರವರ ಜಮೀನು ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ.ನಂ.50/7 ಬಿ ರಲ್ಲಿನ 32 ಗುಂಟೆಯ ಪೂರ್ವಕ್ಕೆ – ಸರ್ಕಾರಿ ಹಳ್ಳ ಎಂದರೆ ಸರಿ. ಪಶ್ಚಿಮಕ್ಕೆ – ಕೃಷ್ಣೇಗೌಡರ ರವರ ಜಮೀನು ಎಂದರೆ ಸಾಕ್ಷಿಯು ಅವರನ್ನು

ನರಸಿಂಹಮೂರ್ತಿ ಎಂದು ಕೂಡ ಕರೆಯುತ್ತಾರೆ ಎಂದು ನುಡಿಯುತ್ತಾರೆ. ಉತ್ತರಕ್ಕೆ - ಕೆಂಚಯ್ಯ ರವರ ಜಮೀನು ಎಂದರೆ ಸರಿ, ದಕ್ಷಿಣಕ್ಕೆ - ರಂಗಹನುಮಯ್ಯ ರವರ ಜಮೀನು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನನ್ನ ತಂದೆ ಚಿಕ್ಕರಂಗಯ್ಯ ರವರ ಜಮೀನು ಎಂದು ನುಡಿಯುತ್ತಾರೆ. ಸ.ನಂ.52/7 ಬಿ ರಲ್ಲಿನ 32 ಗುಂಟೆಯ ಖಾತೆ ಮತ್ತು ಪಹಣಿ ವಾದಿಯ ತಂದೆ ಭದ್ರಯ್ಯ ರವರ ಹೆಸರಿನಲ್ಲಿ ಖಾತೆ ಮತ್ತು ಪಹಣಿ ಇರುತ್ತದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ವಾದಿಯ ತಂದೆಯ ಹೆಸರಿಗೆ ಖಾತೆ ಮತ್ತು ಪಹಣಿ ಇದ್ದರೂ ಕೂಡ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಯ ತಂದೆಯ ಹೆಸರಿನಲ್ಲಿ ಖಾತೆ ಮತ್ತು ಪಹಣಿ ಇದ್ದು ಈಗಲೂ ಕೂಡ ವಾದಿಯೇ ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿಯ ತಂದೆ ಭದ್ರಯ್ಯ ರವರು ತೀರಿಕೊಂಡಿದ್ದಾರೆ ಎಂದರೆ ಸರಿ. ಭದ್ರಯ್ಯ ರವರು ತೀರಿಕೊಂಡ ನಂತರ ಅವರ 6 ಜನ ಮಕ್ಕಳು ಒಟ್ಟು ಕುಟುಂಬದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಮೇಲೆ ಸಾಲವನ್ನು ಪಡೆಯಲು ಪ್ರಯತ್ನಿಸಿದಾಗ ಈ ದಾವಾ ಸಲ್ಲಿಸುವ ಒಂದು ವಾರದ ಹಿಂದೆ ಖಾತೆ ಮತ್ತು ಪಹಣಿ ಬದಲಾವಣೆಯಾಗಿರುವ ವಿಚಾರ ವಾದಿಗೆ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನ ವಾದಿಯ ಸ್ವಾಧೀನಾನುಭವಕ್ಕೆ ನೀವು ತೊಂದರೆ ನೀಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಂದೆ ವಿದ್ಯಾವಂತರು ಎಂದರೆ ಸರಿಯಲ್ಲ. ವಾದಿ ತಿಮ್ಮಯ್ಯ ರವರು ಅವಿದ್ಯಾವಂತ ಎಂದರೆ ಸರಿಯಲ್ಲ. ನಿಮ್ಮ ತಂದೆ ಬಹಳ ಜ್ಞಾನವಂತರು ಎಂದರೆ ಸರಿಯಲ್ಲ. ಹಾಗಾಗಿ ದಾವಾ ಸ್ವತ್ತಿನ ಖಾತೆಯನ್ನು ನಿಮ್ಮ ತಂದೆಯ ಹೆಸರಿಗೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನನ್ನ ತಂದೆಯ ಅಣ್ಣ ತಮ್ಮಂದಿರು ಮತ್ತು ನಮ್ಮ ತಾತನ ನಡುವೆ ಆದ ವಿಭಾಗದಲ್ಲಿ ನನ್ನ ತಂದೆಗೆ ಖಾತೆಯಾಗಿರುತ್ತದೆ ಎಂದು ನುಡಿಯುತ್ತಾರೆ. 1995-96, 1997 ರ ಇಸವಿಯಲ್ಲಿ ಭದ್ರಯ್ಯ ರವರ ಹೆಸರಿಗೆ ದಾವಾ ಸ್ವತ್ತಿನ ಖಾತೆ ಇರುತ್ತದೆ ಎಂದರೆ ಸರಿಯಲ್ಲ. 1998-99 ರಲ್ಲೂ ಕೂಡ

ಭದ್ರಯ್ಯ ರವರ ಹೆಸರಿಗೆ ಖಾತೆ ಇತ್ತು ಎಂದರೆ ಸರಿಯಲ್ಲ.

2. ನಿಮ್ಮ ತಂದೆಗೆ ಎಷ್ಟನೇ ಇಸವಿಯಲ್ಲಿ ಖಾತೆ ಬಂದಿರುತ್ತದೆ ಎಂದರೆ ಸಾಕ್ಷಿಯು 1995-96 ರಲ್ಲಿ ದೊಡ್ಡಕಾಳಯ್ಯ ರವರ 4 ಜನ ಮಕ್ಕಳ ನಡುವೆ ಆದ ವಿಭಾಗದಲ್ಲಿ ನನ್ನ ತಂದೆಗೆ ಖಾತೆ ಬಂದಿರುತ್ತದೆ ಎಂದು ನುಡಿಯುತ್ತಾರೆ. 1999-2000 ನೇ ಇಸವಿಯಲ್ಲಿ ನಿಮ್ಮ ಖಾತೆಯನ್ನು ಬದಲಾವಣೆ ಮಾಡಿಕೊಂಡಿದ್ದರೂ ಕೂಡ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಡಿ.2 ರಿಂದ 5 ರವರೆಗಿನ ದಾಖಲಾತಿಗಳಲ್ಲಿ ವಾದಿಯ ಹೆಸರಿಗೆ ಖಾತೆ ಇರುತ್ತದೆ ಎಂದರೆ ಸರಿಯಲ್ಲ. ನಿಡಿ.4 ರಲ್ಲಿ 2000 ಇಸವಿಯಲ್ಲಿ ನಿಮ್ಮ ತಂದೆಗೆ ಖಾತೆಯಾಗಿದೆ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ನಿಡಿ.6 ರಲ್ಲಿ 1995-96 ರಲ್ಲಿ ಖಾತೆಯಾಗಿರುವಂತೆ ನೀವು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಅಲ್ಲಿಂದ ಇಲ್ಲಿಯವರೆಗೆ ವಾದಿ ಮತ್ತು ಅವರ ಅಣ್ಣ ತಮ್ಮಂದಿರು ದಾವಾ ಅನುಸೂಚಿ ಸ್ವತ್ತಿನಲ್ಲಿ ಸ್ವಾಧೀನಾನುಭವ ಹೊಂದಿ ತೆಂಗಿನ ತೋಟ ಮಾಡಿದ್ದಾರೆ ಎಂದರೆ ಸರಿಯಲ್ಲ.

3. ನಿಮ್ಮ ಮುಖ್ಯ ವಿಚಾರಣ ಪ್ರಮಾಣ ಪತ್ರವನ್ನು ಯಾರು ಬರೆದಿದ್ದಾರೆ ಎಂದರೆ ನಾನೇ ಹೇಳಿ ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿನ ಸಹಿ ಯಾರದ್ದು ಎಂದರೆ ಸಾಕ್ಷಿಯು ನನ್ನ ಸಹಿ ಎಂದು ನುಡಿಯುತ್ತಾ:. ಸ.ನಂ.50/1 ರಲ್ಲಿ 28 ಗುಂಟೆ ನಿಮ್ಮ ತಂದೆಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಭದ್ರಯ್ಯನ ಮಕ್ಕಳು 6 ಜನ ಸ,ನಂ.50/1 ರ 28 ಗುಂಟೆಗೆ 2022 ರಲ್ಲಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸ,ನಂ.50/1 ರ 28 ಗುಂಟೆಯ ಚಕ್ಕುಬಂದಿ ಪೂರ್ವಕ್ಕೆ - ಸರ್ಕಾರಿ ಹಳ್ಳ, ಪಶ್ಚಿಮಕ್ಕೆ - ಕೃಷ್ಣ ಮೂರ್ತಿ, ಉತ್ತರಕ್ಕೆ - ಕೆಂಚಯ್ಯ, ದಕ್ಷಿಣಕ್ಕೆ - ಕೆಂಚಯ್ಯ ಎಂದರೆ ಸರಿ. ಈ ಚಕ್ಕುಬಂದಿಯ ಒಳಗೆ ನೀವು ಸ್ವಾಧೀನದಲ್ಲಿ ಇದ್ದು ತೆಂಗಿನ ತೋಟ ಮಾಡಿದ್ದೀರಿ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ವಾದಿಗಳು ಮಾಡಿದ್ದಾರೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು**.

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.